# ಪತ್ರಿಕಾ ಪ್ರಕಟಣೆ

## ಕಲಬುರಗಿ ನಗರದ ರಿಂಗ್ ರೋಡಗಳಲ್ಲಿ ಸುಲಿಗೆ ಮಾಡುವ ಸುಲಿಗೆಖೋರರ ಬಂಧನ

ಕಲಬುರಗಿ ನಗರದ ಗ್ರಾಮೀಣ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಮಾನ್ಯ ಶ್ರೀ ವಾಯ್.ಎಸ್. ರವಿಕುಮಾರ, ಐ.ಪಿ.ಎಸ್, ಪೊಲೀಸ್ ಆಯುಕ್ತರು, ಕಲಬರುಗಿ ನಗರ ಮಾನ್ಯ ಶ್ರೀ ಡಿ. ಕಿಶೋರಬಾಬು, ಐ.ಪಿ.ಎಸ್, ಉಪ ಪೊಲೀಸ ಆಯುಕ್ತರು (ಕಾ.ಸು.) ಕಲಬುರಗಿ ನಗರ, ಮಾನ್ಯ ಶ್ರೀ ಶ್ರೀಕಾಂತ ಕಟ್ಟಿಮನಿ ಉಪ ಪೊಲೀಸ ಆಯುಕ್ತರು ( ಅಪರಾಧ ಮತ್ತು ಸಂಚಾರ ) ಕಲಬುರಗಿ ನಗರ, ಮಾನ್ಯ ಎ.ಸಿ.ಪಿ. ಶ್ರೀ ಜೆ. ಹೆಚ್. ಇನಾಮದಾರ (ಸಿ) ಉಪವಿಭಾಗ ಕಲಬುರಗಿ ನಗರ ರವರ ಮಾರ್ಗದರ್ಶನದಲ್ಲಿ ಶ್ರೀ ಬಾಪು ಚವ್ಹಾಣ ಪಿ.ಐ. ಗ್ರಾಮೀಣ ಪೊಲೀಸ ಠಾಣೆ ಕಲಬುರಗಿ ನಗರ ಇವರ ನೇತೃತ್ವದಲ್ಲಿ ಶ್ರೀ ಕವತಾ ಚವ್ಹಾಣ ಪಿ.ಎಸ್.ಐ. (ಕಾ.ಸು.), ಮತ್ತು ಸಿಬ್ಬಂದಿಯವರಾದ ಸಿರಾಜ ಪಟೇಲ, ಅಂಬಾಜಿ, ಮಲ್ಲಿಕಾರ್ಜುನ, ನಾಗೇಂದ್ರ, ಪ್ರಕಾಶ ಮತ್ತು ಪ್ರಶಾಂತ ಇವರು ರಾತ್ರಿ ಸಮಯದಲ್ಲಿ ಕಲಬುರಗಿ ನಗರದ ರಿಂಗ್ ರೋಡಗೆ ಹೊಂದಿಕೊಂಡು ಇರುವ ನಿರ್ಜನ ಪ್ರದೇಶಗಳಲ್ಲಿ ಕೈಯಲ್ಲಿ ಮಾರಕ ಅಸ್ತ್ರಗಳನ್ನು ಹಿಡಿದುಕೊಂಡು ಜನರನ್ನು ಹೆದರಿಸಿ ಸುಲಿಗೆ ಮಾಡುವ ಸುಲಿಗೆಖೋರರಾದ 1)ಮಿರ್ಜಾ ಇಮ್ರಾನ ಬೇಗ ತಂದೆ ಮಿರ್ಜಾ ಮೊಗಲಿಯಾರ ಬೇಗ ವಯಾ: 21 ವರ್ಷ ಉ: ಕೂಲಿ ಕೆಲಸ ಜಾ: ಮುಸ್ಲಿಂ ಸಾ: ಪಾಶಾಪೂರ ಜೋಟಾ ರೋಜಾ ಕಲಬುರಗಿ 2) ಮಿರ್ಜಾ ಜುಬೇರ ಬೇಗ ತಂದೆ ಮಿರ್ಜಾ ರಸೀದ್ ಬೇಗ ವಯಾ: 20 ವರ್ಷ ಉ: ಕೂಲಿ ಕೆಲಸ ಸಾ: ಪಾಶಾಪೂರ ಜೋಟಾ ರೋಜಾ ಕಲಬುರಗಿ 3) ಮಹ್ಮದ ಶೇಮಿರ್ ತಂದೆ ಮಹ್ಮದ ನಬಿಸಾಬ ವಯಾ: 21 ವರ್ಷ ಉ: ಆಟೋ ಚಾಲಕ ಸಾ: ಫಿರದೋಸ ಕಾಲೋನಿ ಕಲಬುರಗಿ ಇವರನ್ನು ದಿನಾಂಕ 27.05.2021 ರಂದು ಇವರಿಗೆ ಹಿಡಿದು ಅವರಿಂದ ಅಂದಾಜ 3,00,000/- ರೂಪಾಯಿ ಬೆಲೆ ಬಾಳುವ ಒಂದು ಆಟೋ, ಮೂರು ಮೋಟಾರ ಸೈಕಲಗಳು, ವಿವಿಧ ಕಂಪನಿಯ 5 ಮೋಬೈಲ್ಗಳು, ನಗದು ಹಣ ಮತ್ತು ಸುಲಿಗೆ ಮಾಡಲು ಬಳಸಿದ ಚಾಕು ಜಪ್ತಿ ಪಡಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡಲಾಗಿದೆ.

ಸುಲಿಗೆಖೋರರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡುವಲ್ಲಿ ಯಶ್ವಸಿಯಾದ ಅಧಿಕಾರಿ ಮತ್ತು ಸಿಬ್ಬಂದಿಯವರ ಕಾರ್ಯಕ್ಕೆ ಮಾನ್ಯ ಪೊಲೀಸ್ ಆಯುಕ್ತರು, ಮಾನ್ಯ ಡಿ.ಸಿ.ಪಿ. (ಕಾ.ಸು.), ಮಾನ್ಯ ಎ.ಸಿ.ಪಿ. (ಸಿ) ಉಪವಿಭಾಗ ಕಲಬುರಗಿ ನಗರ ರವರು ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.